ಆ) ಕೆರೆಗೆ ಪಶ್ಚಿಮದ ಕಡೆಯಿಂದ ಬಂದು ಸೇರುವ ದೊಡ್ಡ ಮೋರಿಗೆ ಸಿಲ್ಟ್ ಟ್ರಾಪ್ ಅನ್ನು ಮತ್ತು ಕಸಕಡ್ಡಿ ಇತರ ವಸ್ತುಗಳು ಕೆರೆಗೆ ಬರದಂತೆ ತಡೆಯಲು ಕಬ್ಬಿಣದ ಸರಳುಗಳನ್ನು ಅಳವಡಿಸಲಾಗಿದೆ.

ಇ) ಬಂದಿದೆ ಸ್ವಾಮಿ.

ಈ) ಭಾರತೀಯ ನೌಕಾ ಕಡೆಯ ಹಿರಿಯ ನಿವೃತ್ತ ಅಧಿಕಾರಿಯವರ ನೇತೃತ್ವದಲ್ಲಿ ಏಕೋ ಸೌಂಡಿಂಗ್ ಪರೀಕ್ಷೆಗಳನ್ನೊಳಗೊಂಡಂತೆ ಬಹಳಷ್ಟು ತಾಂತ್ರಿಕ ಪರೀಕ್ಷೆಗಳನ್ನು ಕೈಗೊಳ್ಳಲಾಗಿದೆ. ಹಾಗೂ ಕೈಗೊಳ್ಳಲಾಗುತ್ತಿದೆ. ಈ ಬಗೆಗಿನ ವರದಿಗಳನ್ನು ಅಂತಿಮವಾಗಿ ಸಿದ್ಧಪಡಿಸಿದ ತಕ್ಷಣ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೈಸೂರು ಜಿಲ್ಲೆಯಲ್ಲಿ ಪೊಲೀಸ್ ನೇಮಕಾತಿಯನ್ನು ಸ್ಥಗಿತಗೊಳಿಸಿರುವುದು

247 - ಶ್ರೀ ವಿ. ರಾಮದಾಸ್ (ಕೃಷ್ಣರಾಜ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಜಿಲ್ಲೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್‌ಗಳ ನೇಮಕಾತಿಗೆ ಪರೀಕ್ಷೆ, ಸಂದರ್ಶನ ಮತ್ತು ದೇಹದಾರ್ಢ್ಯ ಪರೀಕ್ಷೆ ನಡೆಸಿ ನೇಮಕಾತಿ ಆದೇಶವನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ನೇಮಕಾತಿ ಆಜ್ಞೆಯನ್ನು ಹೊರಡಿಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಹೌದು.

ಆ) ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ನೇಮಕಾತಿ ಬಗ್ಗೆ ಆದೇಶ ಹೊರಡಿಸಲು ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು : ಮಂಡಿಸಲಾಯಿತು.

ಪ್ರಕಟಣೆ

ಸಭಾಧ್ಯಕ್ಷರು : ದಿನಾಂಕ 20ನೇ ಮಾರ್ಚ್ 1995ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಸಭೆಯು ಈ ಕೆಳಕಂಡ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಯಿತು.

ಮಂಗಳವಾರ ದಿನಾಂಕ 21.3.1995 ಹಾಗೂ	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ
ಬುಧವಾರ ದಿನಾಂಕ 22.3.1995	ಚರ್ಚೆ
ಗುರುವಾರ ದಿನಾಂಕ 23.3.1995	ಆಯವ್ಯಯ ಮಂಡನೆ
ಶುಕ್ರವಾರ ದಿನಾಂಕ 24.3.1995	
ಶನಿವಾರ ದಿನಾಂಕ 25.3.1995	ಆಯವ್ಯಯದ ಮೇಲೆ ಸಾಮಾನ್ಯಚರ್ಚೆ
ಸೋಮವಾರ ದಿನಾಂಕ 27.3.1995	
ಮಂಗಳವಾರ ದಿನಾಂಕ 28.3.1995	
ಬುಧವಾರ ದಿನಾಂಕ 29.3.1995 9.30 ಗಂಟೆಗೆ	1) ಹಣಕಾಸು ಸಚಿವರಿಂದ ಉತ್ತರ ಧನವಿನಿಯೋಗ ವಿಧೇಯಕ ಮಂಡನೆ ಹಾಗೂ ಅಂಗೀಕರಿಸುವುದು.

	2)	ವಿಧೇಯಕಗಳ ಮಂಡನೆ ಮತ್ತು ಅಂಗೀಕಾರ (ತೆರಿಗೆಗೆ ಸಂಬಂಧಿಸಿದ ವಿಧೇಯಕಗಳು)
ಗುರುವಾರ, ದಿನಾಂಕ 30.3.1995	1)	1994-95ನೇ ಸಾಲಿನ ಅನುಪೂರಕ ಅಂದಾಜುಗಳ ಮೇಲೆ ಚರ್ಚೆ ಹಾಗೂ ಅಂಗೀಕಾರ(ಎರಡನೇ ಕಂತು)
	2)	1994-95ನೇ ಸಾಲಿನ ಅನುಪೂರಕ ಅಂದಾಜುಗಳ ಮಂಡನೆ, ಚರ್ಚೆ ಹಾಗೂ ಅಂಗೀಕಾರ(ಅಂತಿಮ ಕಂತು)
ಶುಕ್ರವಾರ, ದಿನಾಂಕ 31.3.1995	1)	ಶಾಸನ ರಚನಾ ಕಾರ್ಯಕಲಾಪ
	2)	ಖಾಸಗಿ ಕಾರ್ಯಕಲಾಪ
ಸೋಮವಾರ, ದಿನಾಂಕ 3.4.1995		ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ
ಮಂಗಳವಾರ, ದಿನಾಂಕ 4.4.1995		ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ
ಬುಧವಾರ, ದಿನಾಂಕ 5.4.1995		ಉತ್ತರ ಹಾಗೂ ಮತಕ್ಕೆ ಹಾಕುವುದು.
ಗುರುವಾರ, ದಿನಾಂಕ 6.4.1995	1)	ಶಾಸನ ರಚನಾ ಕಾರ್ಯಕಲಾಪ ಹಾಗೂ ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ ಚರ್ಚೆ
ಶುಕ್ರವಾರ, ದಿನಾಂಕ 7.4.1995	2)	ಖಾಸಗಿ ಸದಸ್ಯರ ಕಾರ್ಯಕಲಾಪಗಳು ಸದನವು ಸಮಿತಿಯ ಶಿಫಾರಸ್ಸಿಗೆ ಒಪ್ಪಿಗೆ ನೀಡಿದೆಯೆಂದು ಭಾವಿಸುತ್ತೇನೆ.

ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ 20.3.1995ರಂದು ಪತ್ರ ಬರೆದು ಶ್ರೀ ಎಂ. ವರದೇಗೌಡರನ್ನು ವಿಧಾನ ಸಭೆಯಲ್ಲಿ ಸರ್ಕಾರೀ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು : ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಮಂಡನೆ ಮಾಡಲಿ ನಂತರ ಅದನ್ನು ತೆಗೆದುಕೊಳ್ಳೋಣ.

ಸಭೆಯ ಮುಂದಿಡಲಾದ ಕಾಗದ ಪತ್ರಗಳ ಪಟ್ಟಿ

I ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೆ,

1978ನೇ ಇಸವಿಯ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ 8(3)ನೇ ಕಲಮಿನ ಮೇರೆಗೆ

1. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು (ನೇಮಕಾತಿ) ನಿಯಮಗಳು 1984ಕ್ಕೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ ದಿನಾಂಕ 24-12-1994ರಂದು ಹೊರಡಿಸಲಾದ ಸಿಆಸುಇ 58 ಸೇನಿಇ 94ನೇ ಕ್ರಮಾಂಕದ ಅಧಿಸೂಚನೆ